ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಶಾಖೆ / ವಿಷಯ : DEPARTMENT / SUBJECT: ವಿಧಾನಸಭೆ ಅಧಿವೇಶನ - ಹಕ್ಕುಚ್ಯುತಿ

ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ ದಿನಾಂಕ : DATE: 10/3/21

# ಹಕ್ಕುಚ್ಯುತಿ ಅನುಮತಿಗೆ ಸಿಡಿಲು ಗುಡುಗು

10/03/21

**ವಿಧಾನಸಭೆ:** ವಿಧಾನಸಭೆಯಲ್ಲಿ ಭದ್ರಾ ವತಿ ಶಾಸಕ ಬಿ.ಕೆ.ಸಂಗಮೇಶ್ ಅಂಗಿ ಬಿಚ್ಚಿ, ಸಭಾಧ್ಯಕ್ಷರ ವಿರುದ್ಧ ಕಿಡಿಕಾರಿದ್ದ ಪ್ರಕರಣ ಮತ್ತೆ ಸದನದಲ್ಲಿ ಮಂಗಳವಾರ ಪ್ರತಿಧ್ವನಿಸಿತು. ಈ ಬಗ್ಗೆ ಹಕ್ಕುಚ್ಯುತಿ ಮಂಡಿಸಲು ಆಡಳಿತ ಪಕ್ಷದ ಸದಸ್ಯ ಅರಗ ಜ್ಞಾನೇಂದ್ರ ಮುಂದಾಗಿದ್ದು, ಇದಕ್ಕೆ ಸಭಾಧ್ಯಕ್ಷರು ಅನುಮತಿ ಕೊಟ್ಟ ವಿಷಯ ಉಭಯ ಪಕ್ಷದ ಸದಸ್ಯರ ನಡುವೆ ವಾಕ್ಸಮರಕ್ಕೆ ಸಾಕ್ಷಿಯಾಯಿತು.

ಸಭಾಧ್ಯಕ್ಷರ ಸ್ಥಾನ ಸಂಸದೀಯ ವ್ಯವಸ್ಥೆಯಲ್ಲಿ ಸಿಎಂಗಿಂತಲೂ ಎತ್ತರದ್ದು. ಆದರೆ ಶಾಸಕ ಸಂಗಮೇಶ್ ಅವರು ಅದಕ್ಕೆ ಅಗೌರವ ಉಂಟು ಮಾಡಿದ್ದಾರೆ. ಒಂದು ದೇಶ-ಒಂದು ಚುನಾವಣೆ ವಿಷಯ ದಲ್ಲೂ ಕಾಂಗ್ರೆಸ್ ನಡೆ ಸ್ಪೀಕರ್ ಅವರ ಪೀಠಕ್ಕೆ ಧಕ್ಕೆ ತಂದಿದೆ. ಹಾಗಾಗಿ ಹಕ್ಕುಚ್ಯುತಿ ಮಂಡಿಸಲು ಅವಕಾಶ ಕೋರಿದ ಜ್ಞಾನೇಂದ್ರ ಅವರಿಗೆ ಸಭಾಧ್ಯಕ್ಷರು ಅನುಮತಿ ಕೊಟ್ಟರು. ಇದಕ್ಕೆ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಆಕ್ಷೇಪಿಸಿದರೂ, ಪಟ್ಟು ಬಿಡದೆ ಅಂದಿನ ಪ್ರಕರಣ ಪ್ರಸ್ತಾಪಿಸಿ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಸದನದಲ್ಲಿ ಅವಾಚ್ಯ, ಅಶ್ಲೀಲ ಶಬ್ದಬಳಕೆ, ಅಗೌರವ ಮತ್ತು ಅಸಭ್ಯ ವರ್ತನೆ ಎಂದರು.

**ಕಿಡಿ ಹೊತ್ತಿಸಿದ ಅರಗ ನುಡಿ:** ಶಾಸಕ ಸಂಗಮೇಶ್ ಅವರು ಅಂಗಿ ಕಳಚಿದರು. 'ಅದೃಷ್ಟವಶಾತ್ ಬೇರೇನೂ ಕಳಚಲಿಲ್ಲ' ಎಂದಾಗ ಕಾಂಗ್ರೆಸ್ ಸದಸ್ಯರು ಸಾಮೂಹಿಕವಾಗಿ ಎದ್ದುನಿಂತು ವಾಗ್ದಾಳಿಗೆ ಮುಂದಾದರು. ಮಹಿಳಾ ಸದಸ್ಯರಾದ ಲಕ್ಷ್ಮೀ ಹೆಬ್ಬಾಳ್ಕರ್ ಮುಂಚೂಣಿಯಲ್ಲಿದ್ದು ಪದ ಬಳಕೆ ಆಕ್ಷೇಪಿಸಿದರು. ಸದನದಿಂದ ಸಸ್ಪೆಂಡ್ ಆಗಿರುವ ಮತ್ತು ಇಲ್ಲಿಲ್ಲದವರ ಬಗ್ಗೆ ಪ್ರಸ್ತಾಪ ಬೇಡ ಎಂದು ಸಿದ್ದರಾಮಯ್ಯ ಹೇಳಿದಾಗ ನಿಯಮದಲ್ಲಿ ಅವಕಾ ಶವಿದೆ ಎಂದು ಸಭಾಧ್ಯಕ್ಷ ಕಾಗೇರಿ ಅವರು ಸಮರ್ಥಿಸಿ ಮಂಡನೆಗೆ ಅವಕಾಶ ಮುಂದು ವರೆಸಿದರು. ಇದಕ್ಕೆ ದನಿಗೂಡಿಸಿದ ಗೃಹಸಚಿವ ಬೊಮ್ಮಾಯಿ, ಕಂದಾಯ ಸಚಿವ ಆರ್.ಅಶೋಕ್ ಅವರು ಗಳು ಸ್ಪೀಕರ್ ಪೀಠಕ್ಕೆ ಅಗೌರವ ತಂದಿರುವುದು ಸರಿ ಯಲ್ಲ. ಹಕ್ಕುಚ್ಯುತಿ ಬಗ್ಗೆ ಚರ್ಚೆ. ಅಗತ್ಯವಿದೆ ಎಂದರು.



ವಿಧಾನಸಭೆಯಲ್ಲಿ ಕಾಂಗ್ರೆಸ್ ಸದಸ್ಯರು ಸದನದ ಬಾವಿಗಿಳಿದು ಧರಣಿ ನಡೆಸಿದ ಸಂದರ್ಭ.




**ಶರ್ಟ್ ಹರಿದಿದ್ದ ಮಾರ್ಷಲ್‌ಗಳು:** ಈ ಹಂತದಲ್ಲಿ ಸಿದ್ದರಾಮಯ್ಯ ಸಹಿತ ಕಾಂಗ್ರೆಸ್‌ನ ಎಲ್ಲ ಸದಸ್ಯರು ಸಭಾಧ್ಯಕ್ಷರ ಪೀಠದೆದುರು ಬಾವಿಗಿಳಿದು ಧರಣಿ ಆರಂಭಿಸಿದರು. ಅಂದು ಶಾಸಕ ಗೂಳಿಹಟ್ಟಿ ಶೇಖರ್, ಶರ್ಟ್ ಹರಿದುಕೊಂಡು ಟೇಬಲ್ ಮೇಲೆ ಹತ್ತಿದ್ದರೂ ಅಮಾನತು ಆಗಿರಲಿಲ್ಲ. ಆದರೆ ಈಗೇಕೆ ಸಂಗಮೇಶ್ ಅಮಾನತು ಎಂದು ಸಿದ್ದರಾಮಯ್ಯ ಕಿಡಿಕಾರಿದರು. ಈ ವೇಳೆ ಎದ್ದುನಿಂತು ಮಾತನಾಡಿದ ಶೇಖರ್, ಅಂಗಿ ಹರಿದಿದ್ದು ನಾನಲ್ಲ, ಮಾರ್ಷಲ್‌ಗಳು ಎಂದು ಗದ್ದಲದ ನಡುವೆಯೇ ಉದ್ಗರಿಸಿದರು.

**ಸೀಡಿ ಸರ್ಕಾರ ಎಂದ ಸದಸ್ಯರು:** ಅತ್ತ ಜ್ಞಾನೇಂದ್ರ ಶಾಸನಸಭೆ ನಿಯಮ ಉಲ್ಲೇಖಿಸಿ, ನನ್ನ ಧ್ವನಿ ಹತ್ತಿಕ್ಕುವ ಪ್ರಯತ್ನ ನಡೆದಿದೆ ಎಂದು ಮಾತನಾಡುತ್ತಿದ್ದರೆ, ಇತ್ತ ಕಾಂಗ್ರೆಸ್ ಸದಸ್ಯರು ಅಶ್ಲೀಲ ಸರ್ಕಾರಕ್ಕೆ ಧಿಕ್ಕಾರ, ಸೀಡಿ ಸರ್ಕಾರಕ್ಕೆ ಧಿಕ್ಕಾರ, ಅನೈತಿಕ ಸರ್ಕಾರಕ್ಕೆ ಧಿಕ್ಕಾರ ಎಂದು ಏರುದನಿಯಲ್ಲಿ ಘೋಷಣೆ ಮೊಳಗಿಸಿತು. ಸಭಾಧ್ಯಕ್ಷರ ಮನವಿಗೂ ಸ್ಪಂದನೆ ಸಿಗಲಿಲ್ಲ. ಚರ್ಚೆಗೆ ಅವಕಾಶ ಮಾಡಿಕೊಡದಿದ್ದಲ್ಲಿ ಹಕ್ಕುಚ್ಯುತಿ ಸಮಿತಿಗೆ ಶಿಫಾರಸು ಮಾಡುವುದಾಗಿ ಮೂರ್ನಾಲ್ಕು ಬಾರಿ ಪುನರುಚ್ಚರಿಸಿದರೂ ಕಾಂಗ್ರೆಸ್ ಸದಸ್ಯರು ಆಲಿಸುವ ಸೌಜನ್ಯ ತೋರದೆ ಪ್ರತಿಭಟನೆ ಮುಂದುವರೆಸಿದರು. ಅಂತಿಮವಾಗಿ ಸಭಾಧ್ಯಕ್ಷ ಕಾಗೇರಿ ಅವರು ನನ್ನ ಕೋರಿಕೆಗೂ ನೀವು ಮನ್ನಣೆ ನೀಡಿ ಚರ್ಚೆಗೆ ಅವಕಾಶ ಮಾಡಿಕೊಟ್ಟಿಲ್ಲ. ಹಾಗಾಗಿ ಪ್ರಕರಣವನ್ನು ವಿಧಾನಸಭೆಯ ಹಕ್ಕುಚ್ಯುತಿ ಸಮಿತಿಗೆ ರವಾನಿಸುತ್ತೇನೆ. ಸಭಾಧ್ಯಕ್ಷರ ಸ್ಥಾನದ ಬಗ್ಗೆ ಬೇಜವಾಬ್ದಾರಿ ಮಾತನಾಡಿ ಅಗೌರವ ತಂದಿರುವ ಬಗ್ಗೆ ತನಿಖೆ ನಡೆಸಿ ಸದನಕ್ಕೆ ವರದಿ ನೀಡಲಿದೆ ಎಂದು ಸದನವನ್ನು ಮುಂದೂಡಿದರು.